ರತ್ನಾ ಅಶೋಕ ಗೊರವರ, ಧಾರವಾಡ

*ಆರಕ್ಕೇರದವರು, ಮೂರಕ್ಕಿಳಿಯದವರು ಯಾರು?*



ಅಪಾರ್ಟ್‌ಮೆಂಟಿನ 4 ಮತ್ತು 5ನೇ ಫ್ಲೋರ್‌ನಲ್ಲಿರುವ ಮಂಡಿನೋವಿನ ಮುದುಕರು.

ಕೆ.ಎಂ. ವೀರೇಶ್, ಕೂಡ್ಲಿಗಿ

*ಪುರಾಣ ಪ್ರಸಿದ್ಧ ಕಥೆಗಳಲ್ಲಿ ಬಹುಪತ್ನಿತ್ವಕ್ಕೆ ಒಪ್ಪಿಗೆಯಿದ್ದರೂ ಪ್ರಸ್ತುತ ಕಾನೂನಿನಲ್ಲಿ ವಿರೋಧವೇಕೆ?*

3ನೇ ಪತ್ನಿಯಿಂದ ರಾಮಾಯಣ, 2ನೇ ಪತ್ನಿಯಿಂದ ಮಹಾಭಾರತವಾದಂತೆ ಆಗುವುದು ಬೇಡವೆಂದು.

ಎ.ಕೆ. ಪಟ್ಟಾಭಿ, ಬೆಂಗಳೂರು

*ಅಕ್ಕತಂಗಿಯರು ಹೊಂದಿಕೊಂಡು ಬಾಳುವಂತೆ ಓರಗಿತ್ತಿಯರು ಏಕೆ ಹೊಂದಿಕೊಳ್ಳಲಾರರು?*

ಓರಗಿತ್ತಿಯರಲ್ಲಿ ಹೋಲಿಸುವ ಚಾಳಿ ಇರುತ್ತದಲ್ಲ; ಹೋಲಿಕೆ ಇದ್ದಲ್ಲಿ ತಾಳಿಕೆ ಇರದು.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

*ದೀಪದ ಬುಡದಲ್ಲಿ ಕತ್ತಲೆ. ಜ್ಞಾನದ ಬುಡದಲ್ಲಿ?*



ಅಜ್ಞಾನ

ಸುಂದರ್, ಬೆಂಗಳೂರು

*ಭಾವಗೀತೆಗೂ, ಭಗವದ್ಗೀತೆಗೂ ಏನು ಲಿಂಕ್ ರಾಂ?*

ಭಾವ ಎಂಬ ಪದವೇ; ಮನೋ'ಭಾವ'ದಿಂದ ಭಾವಗೀತೆ; ಅರ್ಜುನನ 'ಭಾವ'ನಿಂದ ಭಗವದ್ಗೀತೆ.

ಕೆ.ಎನ್. ಗೋಪಾಲಕೃಷ್ಣ, ಬೆಂಗಳೂರು

*ಈಗಿನ ಕಾಲದಲ್ಲಿ ಗಂಡುಮಕ್ಕಳೂ ಅಡಿಗೆಮನೆ ಕೆಲಸವನ್ನು ಕಲಿತಿದ್ದರೆ ಒಳ್ಳೆಯದಲ್ಲವೆ?*

ಈ ಮಾತನ್ನು ಮೊದಲು ಹೇಳಿದ್ದು ಕುಂತಿ – ಭೀಮನಿಗೆ.

ಅಮರಯ್ಯಾ ಪತ್ರಿಮಠ, ಸುರಪುರ

*ಕಾಲಾಯ ತಸ್ಮೈ ನಮಃ ಎನ್ನುವುದೇಕೆ?*

ಕಾಲು ಆಯಸ್ಸಲ್ಲಿ (ಕಾಲು+ಆಯ=ಕಾಲಾಯ) ಕಲಿತದ್ದು ಮುಕ್ಕಾಲು ಆಯಸ್ಸನ್ನು ಕಾಯುವುದರಿಂದ.

ವೀಣಾ ಎನ್. ಶರ್ಮ, ಬೋಸ್ಮಾನಹಳ್ಳಿ

*ಎದೆ ಸೀಳಿದರೆ ಮೂರಕ್ಷರ ಇಲ್ಲದವರು ಈಗ ಮಂತ್ರಿಗಳಾಗಿದ್ದಾರಲ್ಲಾ...?*

ಹಾಗೆಲ್ಲ ಸುಳ್ಳಾಡಬಾರದು; ಮೂರಕ್ಷರ ಇದೆ; ಜೆಡಿಎಸ್/ಭಾಜಪ/ಕಾ ನ್ ಗ್ರೆ....

ಪ್ಲೇಟ್ ಪ್ರಕಾಶ್, ಹೊಸನಗರ

*ನಕ್ಷತ್ರ ಮಿನುಗು ತಾರೆ; ನಟಿ ಮಿಂಚು ತಾರೆ; ನಟ...?*

ಪ್ರಕಾಶ–ಮಾನವಾಗಿದ್ದರೆ ಮೆಚ್ಚು ತಾರೆ; ಪ್ರಕಾಶ–ಮಾನವಾಗಿರದಿದ್ದರೆ ಗೊಣಗು ತಾರೆ.

ವ. ಉಮೇಶ ಕಾರಂತ, ಮಂಗಳೂರು

*ಗಂಟೆ ನಿಲ್ಲುವುದು ಯಾವಾಗ?*

ಸರಿಯಾಗಿ ಆರು ಗಂಟೆಗೆ. ಮಿಕ್ಕೆಲ್ಲ ಸಮಯದಲ್ಲಿ ಕುಡುಕನಂತೆ ಓರೆ ನಡಿಗೆ.

ಫಾಲನೇತ್ರ ಸಜ್ಜನ, ಶಿರಸಿ

*ನೋಡಿದಷ್ಟೂ ನೋಡಬೇಕೆನಿಸುವುದು ಯಾವುದು?*

'ಕನ್ನಡಿ' ಎಂದಳಾ ಬೆಡಗಿ.

ವಿ. ಹೇಮಂತಕುಮಾರ್, ಬೆಂಗಳೂರು

*ದೇವರಿಗೆ ಈಗ ಅಂದಾಜು ಎಷ್ಟು ವಯಸ್ಸು ಆಗಿರಬಹುದು?*

'ಈ ಮನುಷ್ಯರ ಸಹವಾಸ ಸಾಕಾಗ್ಹೋಗಿದೆಯಪ್ಪ' ಎನಿಸುವಷ್ಟು.

ವಿ. ಹಮೀದ್, ವಿಟ್ಲ

*ಹುಡುಗಿಯ ಅಮ್ಮ ಒಪ್ಪುತ್ತಾರೆ. ಹುಡುಗಿ ಒಪ್ಪುವುದಿಲ್ಲ. ಏನು ಮಾಡಲಿ?*

'ಛೆಛೆ! ನನಗಲ್ಲ, ನನ್ನ ಮಗನಿಗಾಗಿ ಕೇಳಲು ಬಂದಿದ್ದು' ಎಂದು ಹೇಳಿ ಮರ್ಯಾದೆಯಿಂದ ಹೊರಬನ್ನಿ.

## ಬಹುಮಾನಿತ ಪ್ರಶ್ನೆ

ಟಿ.ಎಂ. ಮಾನಪ್ಪ, ಶಿವಮೊಗ್ಗ

*ಮೇಕಪ್ ರೂಮನ್ನು ಗ್ರೀನ್ ರೂಮ್ ಎನ್ನುವುದೇಕೆ?*

ಕಲೆ, ಕಲಾವಿದ ಎಂದೆಂದೂ ಹಸಿರು ಎಂದು ಸೂಚಿಸಲಂತೆ.

ವಿದ್ಯಾ ಪೈ, ಕಾಸರಕೋಡ

*'ಗೂಗಲ್' ಗುರುವಿಗೆ ಪರ್ಯಾಯ ಪದವೆ?*

'ಹೋಂ ವರ್ಕ್' ಕೊಡದಿರುವುದರಿಂದ, ಗೆಸ್ಟ್ ಲೆಕ್ಚರರ್‌ಗೆ ಪರ್ಯಾಯ ಪದ.

ಹೆಚ್.ಆರ್. ಮಂಜುನಾಥ, ಹಾಕತ್ತೂರು

*ಅವಕಾಶಕ್ಕಾಗಿ ಕೈ ಚಾಚುವ ಕೆಲವರು ಕರ್ತವ್ಯಕ್ಕೆ ಹಿಂದೇಟು ಹಾಕುವುದೇಕೆ?*

ಹುಟ್ಟುಗುಣ. ಕಾವಲಿಗೆ ಹಿಂದು, ಮುದ್ದಿಗೆ ಮುಂದು ಆದ ಪಾಮರೇನಿಯನ್ ಜಾತಿಯವರಂತೆ.

ದೀಪಾ ವಿ. ಮಹಾಲೆ, ಸಾಂಬ್ರಾಣಿ

*ಎಮ್ಮೆಯನ್ನು ಕೊಟ್ಟಿಗೆಯಲ್ಲೂ, ಎಮ್ಮೆಲ್ಲೆಯನ್ನು ರೆಸಾರ್ಟ್‌ನಲ್ಲೂ ಇಡುವುದೇಕೆ?*



ಅನ್ನರು ಮೇವು ತೋರಿಸಿ ಹೊಡೆದುಕೊಂಡು ಹೋಗಿಬಿಟ್ಟಾರೆಂಬ ಭಯ.

ಗಂಜಾಂ ನಾಗರಾಜ, ಮೈಸೂರು

*ನೇತ್ರಜ್ವಾಲೆಯಿಂದ ಭಸ್ಮವಾದ 'ಮದನನ ಪ್ರಸಂಗ' ಆಕಸ್ಮಿಕವೋ, ಉದ್ದೇಶಪೂರ್ವಕವೋ?*

ಉದ್ದೇಶಿತವೇ; ಮದನ ಪ್ರಸಂಗವೇ ಕಾಮದ ದೃಶ್ಯಗಳ ವಿರುದ್ಧ ನಿರ್ಮಿಸಿದ ಮೊದಲ ಫೈರ್‌ವಾಲ್!

ಚೆನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ

*ಸ್ವಚ್ಛವಾಗಿರುವುದಕ್ಕೂ ಅಭಿಯಾನ ಬೇಕೆ?*

ದೆಹಲಿಯ ತುಚ್ಛ ಮಾರುತ ಗಬ್ಬುಯಾನ ನೋಡಿದರೆ ಬೇಕೆನಿಸುವುದು ಹೆಚ್ಚಲ್ಲ.

■ ರಾಮ್